## <u>**OS No. 102/2020**</u>
## **PW-1**

ದಿನಾಂಕ: **09.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ **HSP** ವಕೀಲರಿಂದ</u>

ನಿಪಿ-16 ರಂತೆ ದಾವಾ ಅನುಸೂಚಿ ಸ್ವತಿಗೆ ಸಂಬಂಧಿಸಿದ ದಾವೆಯು ಮಾನ್ಯ ಉಚ್ಚ ನ್ಯಾಯಾಲಯದಿಂದ ರಿಮ್ಯಾಂಡ್ ಆಗಿರುತ್ತದೆ ಎಂದರೆ ಸರಿ . ಇನಾಮ್ ರದ್ದತಿ ಕಾಯ್ದೆ ಜಾರಿ ಆದ ನಂತರ ಮರು ಮಂಜೂರಾತಿ ಕೋರಿ ಸಲ್ಲಿಸಿರುವ ದಾಖಲಾತಿಗಳು ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಿಪಿ-39 ರಂತೆ ಅರ್ಜಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಮರು ಮಂಜೂರಾತಿ ಆಗಿರುವ ಆದೇಶವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸರ್ವೇ ನಂ. 266 ಕ್ಕೆ ಸಂಬಂದಧಿಸಿದಂತೆ ಮರು ಮಂಜೂರಾತಿ ಆದೇಶ ನಮಗೆ ಆಗದ ಕಾರಣ ನಾನು ಸದರಿ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮರು ಮಂಜೂರಾತಿ ಆಗದೇ ಇರುವ ಕಾರಣ ಈಗಲೂ ಸಹ ದಾವಾ ಸ್ವತ್ತು ಸರ್ಕಾರಿ ಸ್ವತ್ತು ಎಂದರೆ ಸರಿಯಲ್ಲ. ರೆವಿನ್ಯೂ ಇಲಾಖೆ ಯವರ ಕೈ ತಪ್ಪಿನಿಂದ ಆಗಿ ಕಂದಾಯ ದಾಖಲೆಗಳಲ್ಲಿ ನಮ್ಮ ಹೆಸರು ಮುಂದುವರೆದುಕೊಂಡು ಬರುತ್ತಿದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಸದಸ್ಯರ ಹೆಸರು ಕಂದಾಯ ದಾಖಲೆಗಳಲ್ಲಿ ಇರುವ ಕಾರಣ ನಾವು ಸರ್ಕಾರಿ ಅಧಿಕಾರಿಗಳೊಡನೆ ಶಾಮೀಲಾಗಿ ಸುಳ್ಳು ಸರ್ವೇ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾಸ್ತವವಾಗಿ ದಾವಾ ಸ್ವತ್ತು ಎಲ್ಲಿದೆ ಎಂದು ನನಗಾಗಲೀ ನನ್ನ ತಂದೆಯಾಗಗಲೀ ಗೊತ್ತಿರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಬಂದ ಸದಸ್ಯರ ಹೆಸರುಗಳು ಕಂದಾಯ ದಾಖಲೆಯಲ್ಲಿ ಕೈ ತಪ್ಪಿನಿಂದ ಮುಂದುವರೆದ ಕಾರಣ ನಿಪಿ-39 ರಿಂದ ನಿಪಿ-64 ರ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ದಾವಾ ಸ್ವಸ್ವತ್ತು ಮೊದಲಿನಿಂದಲೂ ಸಹ ಖಾಲಿ ಜಾಗ , ಯಾವುದೇ ಬೆಳೆ ಇರುವುದಿಲ್ಲ ಎಂದರೆ ಸರಿಯಲಲ. ದಾವಾ ಸ್ವತ್ತಿನಲ್ಲಿ ಬೆಳೆ ಬೆಳೆಸುವ ಸಂಬಂಧ ಬೆಳೆ ದೃಡೀಕರಣ ಪತ್ರವನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನೀರಿಲ್ಲದ ಕಾರಣ ಬೆಳೆ ಸತ್ತು ಹೋಗಿರುತ್ತದೆ ಎಂದು

ನುಡಿಯುತ್ತಾರೆ. ಯಾವುದೇ ಸಂದರ್ಬದಲ್ಲಿಯೂ ಸಹ ಬೆಳೆ ಇಲ್ಲದೆ ಇದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಎ ಮತ್ತು ಬಿ ಅನುಸೂಚಿ ಸ್ವತ್ತುಗಳನ್ನು ಸಾರ್ವಜನಿಕರು ಓಡಾಡಲು ರಸ್ತೆ, ದೇವಸ್ಥಾನಕ್ಕೆ ಹಾಗೂ ಆಟದ ಮೈದಾನಕ್ಕೆ ಬಳಸಿಕೊಳ್ಳುತಿರುವಂತಹ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ಹಾಗೂ ಉಳಿದ ಜಾಗವನ್ನು ದನ ಕರುಗಳು ಮೇಯಲು ಬಿಟ್ಟು ಕೊಂಡಿರುವ ಜಾಗವಾಗಿರುತಸ್ತದೆ ಎಂದರೆ ಸರಿಯಲ್ಲ. ಇನಾಮ್ ರದ್ದತಿ ಕಾಯ್ದೆ ಯ ನಂತರದಲ್ಲಿ ದಾವಾ ಅನುಸೂಚಿ ಸ್ವತ್ತು ಗಳು ನಮಗೆ ಮರು ಮಂಜೂರಾತಿ ಆಗಿರದ ವಿಚಾರ ನನಗೆ ಗೊತ್ತು ಎಂದರೆ ಸಾಕ್ಷಿ ಎಂದರೆ ಮೊದಲಿನಿಂದಲೂ ದಾವಾ ಅನುಸೂಚಿ ಸ್ವತ್ತು ಗಳು ನಮಗೆ ಸೇರಿದ ಸ್ವತ್ತಾಗಿರುತ್ತದೆ ಹೀಗಾಗಿ ಮರು ಮಂಜೂರಾತಿಯ ಪ್ರಶ್ನೆ ಬರುವುದಿಲ್ಲ ಎಂದು ನುಡಿಯುತ್ತಾರೆ. ಎಲ್ಲಾ ವಿಚಾರ ಗೊತ್ತಿದ್ದು ದಾವಾ ಸ್ವತ್ತಿನಲ್ಲಿ ವಾಸ್ತವ ಸ್ವಾಧೀನಾನುಭವ ಇಲ್ಲದೇ ಇದ್ದರೂ ಸಹ ದಾಖಲೆಗಳನ್ನು ಸಷ್ಟಿ ಮಾಡಿಕೊಂಡು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಪ್ರಥಮ ಬಾರಿಗೆ 2019 ರಲ್ಲಿ ಕಂದಾಯ ದಾಖಲಾತಿ ಗಳ ಆಧಾರದ ಮೇಲೆ ಸ್ಥಳಕ್ಕೆ ಹೋದಾಗ ಗಲಾಟೆಯಾದ ಕಾರಣ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಸಂಬಂಧ ಹಲವಾರು ಬಾರಿ ಪ್ರತಿವಾದಿಯರು ನಮ್ಮ ವಿರುದ್ದ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಬೇಲಿಯನ್ನು ರಿಪೇರಿ ಮಾಡಲು ಹೋದಾಗ ಗಲಾಟೆಯಾಗಿರುತ್ತದೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ.

ಪ್ರಧಾನ ವ್ಯವಹಾರ ನ್ಯಾಯಾಧೀಶರು,

ತೀರ್ಥಹಳ್ಳಿ